# KARNATAKA LOKAYUKTA

No.Lok/Mys/2431/2018/ARE-6

M.S. Building,
Dr. B.R. Ambedkar Veedhi,
Bengaluru.
Date:24.11.2020.

## REPORT UNDER SECTION 12 (3) OF THE KARNATAKA LOKAYUKTA ACT, 1984

Sub: Proceedings against 1) Smt.Nagamma, President, Vaddagere Gram Panchayath, Gundlupete Taluk, Chamarajanagar District, 2) Sri Sudarshan, Panchayath Development Officer, Vaddagere Gram Panchayath, Gundlupete Taluk, Chamarajanagar District and 3) Sri D.Ravi, the then Panchayath Development Officer, Vaddagere Gram Panchayath, Gundlupete Taluk, Chamarajanagar District, about their misconduct as Public/Government servant – reg. **(complaint against the respondent Nos.1 & 2 is dropped, as per order dtd:4-8-2020)** .

* * * *

The complainant by name Sri.Channabasavarajappa S. S/o Late Subbappa, Vaddagere Village, Terekanambi Hobli, Gundlupete Taluk, Chamarajanagar District, has filed this complaint against 1) Smt.Nagamma, President, Vaddagere Gram Panchayath, Gundlupete Taluk, Chamarajanagar District, 2) Sri Sudarshan, Panchayath Development Officer, Vaddagere Gram Panchayath, Gundlupete Taluk, Chamarajanagar District and 3) Sri D.Ravi, the then Panchayath Development Officer, Vaddagere Gram Panchayath, Gundlupete Taluk, Chamarajanagar District (hereinafter referred to as Respondents 1 to 3) alleging that they being Public/Government Servants have committed misconduct.

Therefore, an investigation has been taken up under Section 9 of the Karnataka Lokayukta Act, 1984.

2) The complainant has alleged that the respondents have mis-appropriated the amounts released under 14th Finance Scheme, during 2017-18 without preparing a plan of action.

3) After taking up the investigation, the comments from the respondents 1 & 2 were called and accordingly, they have submitted their comments. Thereafter, to ascertain the true facts, the matter was referred to the Dy.S.P, Karnataka Lokayukta, Chamarajanagar and who in turn has submitted the investigation report, which reads here as under;

**ಕರ್ನಾಟಕ ಲೋಕಾಯುಕ್ತ, ಚಾಮರಾಜನಗರ**

ಸಂ: ಕ.ಲೋ/ಚಾನ/ಲೋಕ್/ಅರ್ಜಿ/05/2018. ಪೊಲೀಸ್ ಉಪಾಧೀಕ್ಷಕರವರ ಕಛೇರಿ,
ಕರ್ನಾಟಕ ಲೋಕಾಯುಕ್ತ,
ಚಾಮರಾಜನಗರ. ದಿ: 11-07-2019.

ರವರಿಗೆ,
ಮಾನ್ಯ ಅಪರ ನಿಬಂಧಕರು,
ವಿಚಾರಣೆಗಳು-06,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

ಮಾನ್ಯರೆ,

ವಿಷಯ: ಶ್ರೀ ಚನ್ನಬಸವರಾಜಪ್ಪ, ಗ್ರಾಮಪಂಚಾಯಿತಿ ಸದಸ್ಯರು, ವಡ್ಡಗೆರೆ ಗ್ರಾಮ, ಗುಂಡ್ಲುಪೇಟೆ ತಾಲ್ಲೂಕು ರವರು ನೀಡಿರುವ ದೂರು ಅರ್ಜಿಯ ವಿಚಾರಣಾ ವರದಿಯನ್ನು ಸಲ್ಲಿಸಿಕೊಳ್ಳುತ್ತಿರುವ ಬಗ್ಗೆ.

ಉಲ್ಲೇಖ: 1) ಮಾನ್ಯ ಅಪರ ನಿಬಂಧಕರು, ವಿಚಾರಣೆಗಳು-6, ಕರ್ನಾಟಕ ಲೋಕಾಯುಕ್ತ,ಬೆಂಗಳೂರುರವರ ಜ್ಞಾಪನ ಪತ್ರ

ಸಂಖ್ಯೆ: ಕಂಪ್ಲೇಂಟ್/ಲೋಕ್/ಎಂವೈಎಸ್/2431/2018/ಎಆರ್ಇ-6.
ದಿನಾಂಕ: 20-11-2018.

2) ಮಾನ್ಯ ಪೊಲೀಸ್ ಅಧೀಕ್ಷಕರು, ಕ.ಲೋ. ಮೈಸೂರು ರವರ ಜ್ಞಾಪನ ಪತ್ರ ಸಂಖ್ಯೆ: ಕಲೋ/ಮೈವಿ/ಎಸ್‌ಪಿ/ಅರ್ಜಿ/ಲೋಕ್/15/2018.

* * *

ಈ ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂದಿಸಿದಂತೆ ತಮ್ಮಲ್ಲಿ ನಿವೇದಿಸಿಕೊಳ್ಳುವುದೇನಂದರೆ, ಶ್ರೀ ಚನ್ನಬಸವರಾಜಪ್ಪ, ಗ್ರಾಮಪಂಚಾಯಿತಿ ಸದಸ್ಯರು, ವಡ್ಡಗೆರೆ ಗ್ರಾಮ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ ರವರು ನೀಡಿರುವ ದೂರಿನ ಸಾರಾಂಶವೇನೆಂದರೆ ಏಪ್ರಿಲ್- 2017 ನಿಂದ ಡಿಸೆಂಬರ್- 2017 ರವರೆಗೆ ವಡ್ಡಗೆರೆ ಗ್ರಾಮ ಪಂಚಾಯಿತಿಯಲ್ಲಿ ಪಿ.ಡಿ.ಓ ಆಗಿ ಕರ್ತವ್ಯ ನಿರ್ವಹಿಸಿದ್ದ ಶ್ರೀ ಡಿ.ರವಿ ಹಾಗೂ ಅಧ್ಯಕ್ಷರಾದ ಶ್ರೀಮತಿ ನಾಗಮ್ಮ ರವರುಗಳು 14 ನೇ ಹಣಕಾಸು ಯೋಜನೆಯ 2016-17 ಹಾಗೂ 2017-18 ನೇ ಸಾಲಿನ ಅನುದಾನದ ಹಣದಲ್ಲಿ ಕಾಮಗಾರಿಗಳನ್ನು ನಿಯಮಾನುಸಾರವಾಗಿ ಮಾಡದೆ ಹಾಗೂ ಕ್ರಿಯಾ ಯೋಜನೆಗಳಿಗೆ ಅನುಮೋದನೆ ಪಡೆಯದೆ ಮುಂಚಿತವಾಗಿ ಕಾಮಗಾರಿಗಳನ್ನು ಮಾಡಿ ಸುಮಾರು ರೂ. 16 ಲಕ್ಷಕ್ಕೂ ಹೆಚ್ಚಿನ ಹಣವನ್ನು ದುರ್ಬಳಕೆ ಮಾಡಿಕೊಂಡು ಲೂಟಿ ಹೊಡೆದು ಭ್ರಷ್ಟಾಚಾರ ಮಾಡಿರುವುದರಿಂದ ಸದರಿಯವರುಗಳ ಮೇಲೆ ಕಾನೂನು ಕ್ರಮ ಜರುಗಿಸಬೇಕೆಂಬುದು ಅರ್ಜಿಯಲ್ಲಿನ ಆರೋಪಗಳಾಗಿರುತ್ತದೆ. ಸದರಿ ಅರ್ಜಿಯನ್ನು ವಿಚಾರಣೆ ಮಾಡಿ ವಿಚಾರಣಾ ವರದಿಯನ್ನು ಸಲ್ಲಿಸುವಂತೆ ತಮ್ಮ ಉಲ್ಲೇಖ-1 ರ ರೀತ್ಯಾ ಆದೇಶವಾಗಿದ್ದು, ಸದರಿ ದೂರು ಅರ್ಜಿಯನ್ನು ದಿನಾಂಕ: 06-12-2018 ರಂದು ಸ್ವೀಕರಿಸಿ ಪರಿಶೀಲಿಸಿರುತ್ತೇನೆ.

ನಂತರ ಸದರಿ ದೂರು ಅರ್ಜಿಯ ವಿಚಾರಣೆಯ ಸಂಬಂಧವಾಗಿ ದಿನಾಂಕ: 15-12-2018 ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಚಾಮರಾಜನಗರ ರವರಿಗೆ ದಿನಾಂಕ: 01-01-2015 ರಿಂದ ಪ್ರಸ್ತುತ ಇಲ್ಲಿಯವರೆಗೆ ವಡ್ಡಗೆರೆ ಗ್ರಾಮ ಪಂಚಾಯಿತಿಯ ನಗದು ಪುಸ್ತಕದ ನಕಲು, ಸಂದರ್ಶಕರ ಪುಸ್ತಕದ ನಕಲು, ಸಾಮಾನ್ಯ ಸಭೆಯ ನಕಲು, 14ನೇ ಹಣಕಾಸು ಯೋಜನೆಗೆ ಬಿಡುಗಡೆಯಾದ ಹಣ, ಕೈಗೊಂಡ ಕಾಮಗಾರಿಗಳ ವಿವರ, ಕ್ರಿಯಾಯೋಜನೆಗಳ ವಿವರ, ಕಾಮಗಾರಿಗಳನ್ನು ನಿರ್ವಹಿಸಿದ ಗುತ್ತಿಗೆದಾರರ ವಿವರಗಳು ಹಾಗೂ ಜಮಾ ಆಗಿರುವ ಹಣದ ಮಾಹಿತಿಗಳನ್ನು ನೀಡುವಂತೆ ಕೋರಿ ಪತ್ರ ವ್ಯವಹರಿಸಿರುತ್ತೇನೆ.

ನಂತರ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಗುಂಡ್ಲುಪೇಟೆ ರವರ ಪತ್ರ ಸಂಖ್ಯೆ:ತಾ.ಪಂ.ಗು/ಆಡಳಿತ/2018-19. ದಿನಾಂಕ:11.01.2019 ಹಾಗೂ ಪತ್ರ ಸಂಖ್ಯೆ: ತಾ.ಪಂ.ಗು/ಆಡಳಿತ/ 2018-19. ದಿನಾಂಕ:22.03.2019 ಗಳಲ್ಲಿ ವಡ್ಡಗೆರೆ ಗ್ರಾಮ ಪಂಚಾಯಿತಿಯ 14 ನೇ ಹಣಕಾಸು ಯೋಜನೆಗೆ ಸಂಬಂಧಿಸಿದ ದಾಖಲಾತಿಗಳನ್ನು ನೀಡಿದ್ದು ಪರಿಶೀಲಿಸಲಾಗಿ, ವಡ್ಡಗೆರೆ ಗ್ರಾಮ ಪಂಚಾಯಿತಿಯಲ್ಲಿ ದಿ: 20-03-2017 ರಿಂದ ದಿ:26-12-2017 ರ ವರೆಗೆ ವಡ್ಡಗೆರೆ ಗ್ರಾಮಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದ ಶ್ರೀ ಡಿ.ರವಿ ಹಾಗೂ ಅಧ್ಯಕ್ಷರಾದ ಶ್ರೀಮತಿ ನಾಗಮ್ಮ ರವರುಗಳು 14 ನೇ ಹಣಕಾಸು

ಯೋಜನೆಯ 2016–17 ನೇ ಮೊದಲನೇ ಮತ್ತು ಎರಡನೇ ಕಂತುಗಳು ಹಾಗೂ 2017–18 ನೇ ಸಾಲಿನ ಮೊದಲನೇ ಕಂತಿಗಳಲ್ಲಿ ಬಿಡುಗಡೆಯಾದ ಅನುದಾನದ ಹಣದಲ್ಲಿ ಕಾಮಗಾರಿಗಳನ್ನು ಹಾಗೂ ಸಾಮಾಗ್ರಿಗಳ ಖರೀದಿಯ ವಿವರಗಳನ್ನು ನೀಡಿದ್ದು ಪರಿಶೀಲಿಸಲಾಗಿ, ಪ್ರಕ್ರಿಯೆಯನ್ನು ಅನುಷ್ಠಾನಗೊಳಿಸುವಲ್ಲಿ ಮಾರ್ಗಸೂಚಿ ಹಾಗೂ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದೆ ಕ್ರಿಯಾ ಯೋಜನೆಗಳನ್ನು ಅನುಷ್ಠಾನಗೊಳಿಸಿರುವುದು ಈ ಕೆಳಕಂಡ ಅಂಶಗಳಿಂದ ಕಂಡು ಬಂದಿರುತ್ತದೆ.

**14 ನೇ ಹಣಕಾಸು ಯೋಜನೆಯ 2016–17 ಹಾಗೂ 2017–18 ರ ಸಾಲಿನಲ್ಲಿ ಬಿಡುಗಡೆಯಾದ ಅನುದಾನದ ವಿವರ.**

| ವರ್ಷ | 1 ನೇ ಕಂತು (ರೂ. ಲಕ್ಷಗಳಲ್ಲಿ) | 2ನೇ ಕಂತು (ರೂ. ಲಕ್ಷಗಳಲ್ಲಿ) | ಒಟ್ಟು (ರೂ. ಲಕ್ಷಗಳಲ್ಲಿ) |
|---|---|---|---|
| 2016–17 | 10.44 | 8.52 | 18.96 |
| 2017–18 | 08.66 | 08.93 | 17.59 |

**1. <u>ಅನುಮೋದನೆ ಪಡೆಯದೇ ಕಾಮಗಾರಿಗಳನ್ನು ಮಾಡಿರುವುದು</u> :**

14ನೇ ಹಣಕಾಸು ಯೋಜನೆಯ 2017–18 ರ ಮೊದಲ ಕಂತಿನಲ್ಲಿ ಬಿಡುಗಡೆಯಾದ ಅನುದಾನದ ಹಣಕ್ಕೆ ಕ್ರಿಯಾ ಯೋಜನೆಯನ್ನು ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ದಿನಾಂಕ: 26–12–2017 ರಂದು ಮಂಡಿಸಿದ್ದು, ನಂತರ ಸಕ್ಷಮ ಪ್ರಾಧಿಕಾರದಿಂದ ದಿನಾಂಕ: 22–06–2018 ರಂದು ಅನುಮೋದನೆ ಪಡೆದಿರುವುದು ಸರಿಯಷ್ಟೆ.

ಆದರೆ 14 ನೇ ಹಣಕಾಸು ಯೋಜನೆಯ 2017–18 ರ ಮೊದಲ ಕಂತಿನ ಕ್ರಿಯಾ ಯೋಜನೆಯಲ್ಲಿನ ಕೆಲವು ಕಾಮಗಾರಿಗಳನ್ನು ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಹಾಗೂ ಸಕ್ಷಮ ಪ್ರಾಧಿಕಾರದಿಂದ ಅಂದಾಜುಪಟ್ಟಿಗಳಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ಪಡೆಯುವ ಮುಂಚಿತವಾಗಿಯೇ ಏಪ್ರಿಲ್–2017 ರಿಂದ ಡಿಸೆಂಬರ್–2017 ರ ನಡುವಿನ ಅವಧಿಯಲ್ಲಿಯೆ ನಿರ್ವಹಿಸಿ, ನಂತರ ಸದರಿ ಕಾಮಗಾರಿಗಳಿಗೆ ದಿನಾಂಕ: 26–12–2017 ರಂದು ಸಾಮಾನ್ಯ ಸಭೆಯಲ್ಲಿ ಘಟನೋತ್ತರ ಅನುಮತಿ ಪಡೆದಿರುವುದು ದಾಖಲಾತಿಗಳಿಂದ ಕಂಡು ಬಂದಿರುತ್ತದೆ ಹಾಗೂ ಪೂರ್ವಭಾವಿಯಾಗಿ ಕಾಮಗಾರಿಗಳಿಗೆ ರೂ 1,01,947.00 ಗಳು ಹಾಗೂ ಕುಡಿಯುವ ನೀರು, ಬೀದಿ ದೀಪ ಹಾಗೂ ಇತರೆ ಸಾಮಾಗ್ರಿಗಳ ಖರೀದಿಗೆ 2017–18 ರ ಮೊದಲ ಕಂತಿನಲ್ಲಿ ಮೀಸಲಿಟ್ಟಿರುವ ಹಣ ರೂ.2,50,823.00 ಗಳು ಎಲ್ಲಾ ಸೇರಿ ಒಟ್ಟು ರೂ. 3,52,830.00 ಗಳನ್ನು ಪಾವತಿ ಮಾಡಿರುವುದು ಕಂಡು ಬಂದಿರುತ್ತದೆ.

**ಅನುಮೋದನೆ ಪಡೆಯದೆ ಮುಂಚಿತವಾಗಿ ಮಾಡಿರುವ ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿವೆ**

| ಕ್ರ ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಬಿಲ್ಲಿನ ಮೊತ್ತ | ಗುತ್ತಿಗೆದಾರರ ಹೆಸರು | ಚೆಕ್ ನಂ | ದಿನಾಂಕ |
|---|---|---|---|---|---|---|
| 1 | ವಡ್ಡಗೆರೆ ಗ್ರಾಮದ 1 ನೇ | 20553.00 | 20000..00 | ಡಿ. ರವಿ | 32412 | 09.11.2017 |

| | | | | | | |
|---|---|---|---|---|---|---|
| | ವಾರ್ಡನಲ್ಲಿ ಚರಂಡಿ ಹೂಳೆತ್ತುವುದು | | | | | |
| 2 | ಚಿರಕನಳ್ಳಿ ಗ್ರಾಮದಲ್ಲಿ ಚರಂಡಿ ಹೂಳೆತ್ತುವುದು | 39000.00 | 38796.00 | ಇಂಧುದರ್ | 32397 | 25.07.2017 |
| 3 | ಕರಕಲಮಾದಳ್ಳಿ ಗ್ರಾಮದಲ್ಲಿ ಕುಡಿಯುವ ನೀರಿನ ಫೈಪ್‌ಲೈನ್ ದುರಸ್ಥಿ ಕಾಮಗಾರಿ | 46000.00 | 43211.00 | ಇಂಧುದರ್ | 32398 | 25.07.2017 |

**2. ಸಾಮಾಗ್ರಿಗಳ ಖರೀದಿಗೆ ಮೀಸಲಿಟ್ಟಿರುವ ಹಣಕ್ಕಿಂತ ಹೆಚ್ಚಿನ ಹಣ ಬಳಕೆ ಮಾಡಿರುವುದು :**

14 ನೇ ಹಣಕಾಸು ಯೋಜನೆಯ 2016–17 ನೇ ಮೊದಲನೇ ಮತ್ತು ಎರಡನೇ ಕಂತುಗಳು ಹಾಗೂ 2017–18 ನೇ ಸಾಲಿನ ಮೊದಲನೇ ಕಂತುಗಳ ಕ್ರಿಯಾ ಯೋಜನೆಗಳಲ್ಲಿ ಕುಡಿಯುವ ನೀರು, ಬೀದಿ ದೀಪ ಹಾಗೂ ಇತರೆ ಸಾಮಾಗ್ರಿಗಳ ಖರೀದಿಗಾಗಿ ರೂ. 10,09,184.00 ಗಳನ್ನು ಮೀಸಲಿಟ್ಟಿದ್ದು, ಆದರೆ ರೂ.13,80,786.00 ಗಳನ್ನು ಕುಡಿಯುವ ನೀರು, ಬೀದಿ ದೀಪ ಹಾಗೂ ಇತರೆ ಸಾಮಾಗ್ರಿಗಳ ಖರೀದಿಗಾಗಿ ವಿನಿಯೋಗಿಸಿ, ಹೆಚ್ಚುವರಿಯಾಗಿ ರೂ.3,71,602.00 ಗಳನ್ನು ಉಪಯೋಗಿಸಿಕೊಂಡಿದ್ದು, ನಿಯಮಗಳನ್ನು ಪಾಲಿಸದೇ ಇರುವುದು ಕಂಡು ಬಂದಿರುತ್ತದೆ.

**3. ಅಭಿವೃದ್ಧಿ ಕಾಮಗಾರಿಗಳಿಗಿಂತಲೂ ಸಾಮಾಗ್ರಿಗಳ ಖರೀದಿಗೆ ಹೆಚ್ಚಿನ ಹಣ ವಿನಿಯೋಗಿಸಿರುವುದು :**

ನಿರ್ದೇಶಕರು (ಪಂ.ರಾಜ್–2) ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ಗ್ರಾಅಪ 75 ಗ್ರಾಪಸ 2015, ದಿನಾಂಕ: 17–03–2017 ರಲ್ಲಿ ಗ್ರಾಮ ಪಂಚಾಯಿತಿಗೆ ಬಿಡುಗಡೆಯಾದ ಅನುದಾನದ ಹಣದ ಬಳಕೆಯ ಬಗ್ಗೆ ಸುತ್ತೋಲೆಯನ್ನು ಹೊರಡಿಸಿದ್ದು, ಅದರಲ್ಲಿ ಶೇ.90 ರಷ್ಟು ಅನುದಾನವನ್ನು ಮೂಲಭೂತ ಅನುದಾನವಾಗಿ ಆಸ್ತಿ ಸೃಜನೆ ಕಾಮಗಾರಿಗಳಿಗೆ ಮೀಸಲಿಡತಕ್ಕದ್ದು ಮತ್ತು ಶೇ.10 ರಷ್ಟು ಅನುದಾನವನ್ನು ಕಾರ್ಯಾಚರಣೆ ಮತ್ತು ನಿರ್ವಹಣಾ ಕಾಮಗಾರಿಗಳಿಗೆ ಉಪಯೋಗಿಸತಕ್ಕದ್ದು ಹಾಗೂ ಶೇ.90 ರ ಮೂಲಭೂತ ಅನುದಾನದಲ್ಲಿ ಕುಡಿಯುವ ನೀರಿಗೆ ಶೇ.20, ಬೀದಿದೀಪಗಳಿಗೆ ಶೇ.10 ರಷ್ಟನ್ನು ಬಳಸಲು ಮಾರ್ಗಸೂಚಿಯಲ್ಲಿ ಸೂಚಿಸಿರುತ್ತಾರೆ.

ಆದರೆ ವಡ್ಡಗೆರೆ ಗ್ರಾಮ ಪಂಚಾಯಿತಿಯಲ್ಲಿ 14 ನೇ ಹಣಕಾಸು ಯೋಜನೆಯ 2016–17 ನೇ ಮೊದಲನೇ ಮತ್ತು ಎರಡನೇ ಕಂತುಗಳು ಹಾಗೂ 2017–18 ನೇ ಸಾಲಿನ ಮೊದಲನೇ ಕಂತುಗಳ ಅನುದಾನದಲ್ಲಿ ಮಾಡಿರುವ ಕಾಮಗಾರಿಗಳ ಹಾಗೂ ಸಾಮಾಗ್ರಿಗಳನ್ನು ಖರೀದಿಸಿರುವ ಬಿಲ್ಲುಗಳ ದಾಖಲಾತಿಗಳನ್ನು ಪರಿಶೀಲಿಸಲಾಗಿ ಅಭಿವೃದ್ಧಿ ಕಾಮಗಾರಿಗಳಿಗೆ ರೂ. 10,05,963.00 ಗಳನ್ನು ವಿನಿಯೋಗಿಸಿದ್ದು, ಬೀದಿ ದೀಪ, ಕುಡಿಯುವ ನೀರು ಹಾಗೂ ಇತರೆ ಸಾಮಾಗ್ರಿಗಳ

ಖರೀದಿಗೆ ರೂ.12,94,679.00 ಗಳನ್ನು ವಿನಿಯೋಗಿಸಿ ಅಭಿವೃದ್ಧಿ ಕಾಮಗಾರಿಗಳಿಗಿಂತಲೂ ಸಾಮಾಗ್ರಿಗಳ ಖರೀದಿಗೆ ಹೆಚ್ಚಿನ ಹಣ ವಿನಿಯೋಗಿಸಿರುವುದು ದಾಖಲಾತಿಗಳಿಂದ ಕಂಡು ಬಂದಿರುತ್ತದೆ. ಈ ಪ್ರಕ್ರಿಯೆಯಲ್ಲಿ ಮೇಲ್ಕಂಡ ಸುತ್ತೋಲೆಯ ಮಾರ್ಗಸೂಚಿಯ ನಿಯಮಗಳನ್ನು ಪಾಲಿಸದಿರುವದು ಕಂಡು ಬಂದಿರುತ್ತದೆ.

**ವಡ್ಡಗೆರೆ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ ಡಿ.ರವಿ ಹಾಗೂ ಅಧ್ಯಕ್ಷರಾದ ಶ್ರೀಮತಿ ನಾಗಮ್ಮ ರವರುಗಳು ಅವರ ಕರ್ತವ್ಯದ ಅವಧಿಯಲ್ಲಿ 14 ನೇ ಹಣಕಾಸು ಯೋಜನೆಯ 2016-17 ನೇ ಮೊದಲನೇ ಮತ್ತು ಎರಡನೇ ಕಂತುಗಳು ಹಾಗೂ 2017-18 ನೇ ಸಾಲಿನ ಮೊದಲನೇ ಕಂತುಗಳ ಅನುದಾನದಲ್ಲಿ ಮಾಡಿರುವ ಕಾಮಗಾರಿಗಳ ಹಾಗೂ ಖರೀದಿಸಿರುವ ಸಾಮಾಗ್ರಿಗಳ ವಿವರಗಳು ಈ ಕೆಳಕಂಡಂತಿರುತ್ತವೆ.**

ಅ) <u>ಕಾಮಗಾರಿಗಳ ವಿವರಗಳು</u>

| ಕ್ರ ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಬಿಲ್ಲಿನ ಮೊತ್ತ | ಗುತ್ತಿಗೆದಾರರ ಹೆಸರು | ಚೆಕ್ ನಂ | ದಿನಾಂಕ |
|---|---|---|---|---|---|---|
| 1 | ವಡ್ಡಗೆರೆ ಗ್ರಾಮದ ಶಿವಪ್ರಸಾದ್ ಮನೆಯಿಂದ ಬಸವೇಶ್ವರ ದೇವಸ್ಥಾನದವರೆಗೆ ಚರಂಡಿ ನಿರ್ಮಾಣ | 52000.00 | 29440.00 | ಶ್ರೀ ಡಿ.ರವಿ | 32415 | 04.12.2017 |
| 2 | ವಡ್ಡಗೆರೆ ಗ್ರಾಮದ ಶಿವಾರಾಧ್ಯರವರ ಮನೆಯಿಂದ ದೇವಮ್ಮನ ಮನೆಯವರೆಗೆ ಚರಂಡಿ ನಿರ್ಮಾಣ | 52000.00 | 51200.00 | ಶ್ರೀ ಡಿ.ರವಿ | 32411 | 09.11.2017 |
| 3 | ದಾರಿ ಬೇಗೂರು ಗ್ರಾಮದಲ್ಲಿ ರಸ್ತೆಗೆ ಗ್ರಾವೆಲ್ ಹಾಕುವುದು | 52000.00 | 51654.00 | ಡಿ.ಎಸ್.ಬಸವಣ್ಣ | 32391 | 01.07.2017 |
| 4 | ಚಿರಕನಳ್ಳಿ ಗ್ರಾಮದಲ್ಲಿ ಬಸವೇಶ್ವರ ದೇವಸ್ಥಾನದಿಂದ ಬಸ್ ನಿಲ್ದಾಣದವರೆಗೆ ಚರಂಡಿ ನಿರ್ಮಾಣ | 52000.00 | 51844.00 | ಡಿ.ಎಸ್.ಬಸವಣ್ಣ | 32410 | 24.10.2017 |
| 5 | ಚಿರಕನಳ್ಳಿ ಗ್ರಾಮದ ಕೊಂಗಳಯ್ಯನ ಮನೆಯಿಂದ ಗ್ರಾಮ ಪಂಚಾಯಿತಿ ಹಾಲ್ ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ | 52000.00 | 51857.00 | ಡಿ.ಎಸ್.ಬಸವಣ್ಣ | 32416 | 20.12.2017 |
| 6 | ವಡ್ಡಗೆರೆ ಗ್ರಾಮದ ಶಿವಯ್ಯನ ಮನೆಯಿಂದ ಬೆಳ್ಳಯ್ಯನ ಮನೆಯವರೆಗೆ ಚರಂಡಿ ನಿರ್ಮಾಣ | 52000.00 | 51996.00 | ಡಿ.ಎಸ್.ಬಸವಣ್ಣ | 32380 | 12.05.2017 |
| 7 | ಹೆಗ್ಗವಾಡಿ ಗ್ರಾಮದಲ್ಲಿ ಪ.ಜಾತಿ ಬೀದಿಯಲ್ಲಿ ಗ್ರಾವೆಲ್ | 52000.00 | 51513.00 | ಡಿ.ಎಸ್.ಬಸವಣ್ಣ | 33375 | 27.04.2017 |

| | | | | | | |
|---|---|---|---|---|---|---|
| | ಹಾಕುವುದು | | | | | |
| 8 | ಚಿರಕನಳ್ಳಿ ಗ್ರಾಮದಲ್ಲಿ ಜಾನುವಾರುಗಳು ಕುಡಿಯುವ ನೀರಿನ ತೊಟ್ಟಿ | 52000.00 | 50793.00 | ಬಿ.ಆರ್.ಲೋಕೇಶ್ | 32407 | 26.09.2017 |
| 9 | ವಡ್ಡಗೆರೆ ಗ್ರಾಮದಲ್ಲಿ ಬಸವನಾಯ್ಕ ನ ಮನೆಯಿಂದ ಚಿಕ್ಕತಮ್ಮನಾಯ್ಕನ ಮನೆಯವರೆಗೆ ಚರಂಡಿ ನಿರ್ಮಾಣ | 158000.00 | 67681.00 | ಶ್ರೀ ಡಿ.ರವಿ | 32402 | 09.08.2017 |
| 10 | ಯರಿಯೂರು ಗ್ರಾಮದಲ್ಲಿ ಪ.ಜನಾಂಗದ ಸ್ಮಶಾನ ಅಭಿವೃದ್ಧಿ ಕಾಮಗಾರಿ | 32000.00 | 32000.00 | ಡಿ.ಎಸ್.ಬಸವಣ್ಣ | 32387 | 07.06.2017 |
| 11 | ಯರಿಯೂರು ಗ್ರಾಮದಲ್ಲಿ ಪ.ಜಾತಿ ಬೀದಿಯಲ್ಲಿ ಚರಂಡಿ ಹೂಳೆತ್ತುವುದು | 15000.00 | 14728.00 | ಡಿ.ಎಸ್.ಬಸವಣ್ಣ | 32385 | 07.06.2017 |
| 12 | ಚಿರಕನಳ್ಳಿ ಗ್ರಾಮದಲ್ಲಿ ಹೊಸದಾಗಿ ಕೊರೆದಿರುವ ಬೋರ್‌ವೆಲ್‌ಗೆ ಫೈಪ್‌ಲೈನ್ ಕಾಮಗಾರಿ | 211000.0 | 179682.00 | ಶ್ರೀ ಡಿ.ರವಿ | 32383 | 24.05.2017 |
| 13 | ದಾರಿಬೇಗೂರು ಗ್ರಾಮದಲ್ಲಿ ಹೂಳೆತ್ತುವುದು ಹಾಗೂ ರಸ್ತೆಗೆ ಗ್ರಾವೆಲ್ ಹಾಕುವ ಕಾಮಗಾರಿ | 37000.00 | 36377.00 | ಡಿ.ಎಸ್.ಬಸವಣ್ಣ | 32392 | 04.07.2017 |
| 14 | ಕರಕಲಮಾದಳ್ಳಿ ಗ್ರಾಮದಲ್ಲಿ ಚರಂಡಿ ಹೂಳೆತ್ತುವುದು | 30000.00 | 29640.00 | ಕೆ.ಎಂ. ಪ್ರಶಾಂತ್ | 32396 | 25.07.2017 |
| 15 | ಯರಿಯೂರು ಮರಿಯಪ್ಪನ ಮನೆಯ ಮುಂದಕ್ಕೆ ರಸ್ತೆಗೆ ಗ್ರಾವೆಲ್ ಹಾಕುವುದು | 37000.00 | 36714.00 | ಡಿ.ಎಸ್.ಬಸವಣ್ಣ | 32386 | 07.06.2017 |
| 16 | ಕರಕಲಮಾದಳ್ಳಿ ಗ್ರಾಮದಲ್ಲಿ ಚರಂಡಿ ದುರಸ್ಥಿ ಕಾಮಗಾರಿ | 44000.00 | 43857.00 | ಕೆ.ಎಂ. ಪ್ರಶಾಂತ್ | 33389 | 03.07.2017 |
| 17 | ಚಿರಕನಳ್ಳಿ ಗ್ರಾಮದಲ್ಲಿ ಚರಂಡಿ ಹೂಳೆತ್ತುವುದು | 39000.00 | 38796.00 | ಇಂಧುದರ್ | 32397 | 25.07.2017 |
| 18 | ವಡ್ಡಗೆರೆ ಗ್ರಾಮದ 1 ನೇ ವಾರ್ಡನಲ್ಲಿ ಚರಂಡಿ ಹೂಳೆತ್ತುವುದು | 20553.00 | 20000.00 | ಶ್ರೀ ಡಿ.ರವಿ | 32412 | 09.11.2017 |
| 19 | ಕರಕಲಮಾದಳ್ಳಿ ಗ್ರಾಮದಲ್ಲಿ ಕುಡಿಯುವ ನೀರಿನ ಫೈಪ್‌ಲೈನ್ ದುರಸ್ಥಿ ಕಾಮಗಾರಿ | 46000.00 | 43211.00 | ಇಂಧುದರ್ | 32398 | 25.07.2017 |
| | **ಒಟ್ಟು ಮೊತ್ತ** | **1085553.00** | **932983.00** | | | |

## ಆ) ಖರೀದಿಸಿರುವ ಸಾಮಾಗ್ರಿಗಳ ವಿವರಗಳು

| ಕ್ರಸಂ | ವಿವರ | ಮೊತ್ತ | ಚೆಕ್ ನಂ | ದಿನಾಂಕ |
|---|---|---|---|---|
| 1 | ಮಾತಾಜಿ ಎಲೆಕ್ಟ್ರಿಕಲ್ಸ & ಹಾರ್ಡ್‌ವೇರ್ಸ್ | 226615.00 | 32381 | 25-05-2017 |
| 2 | ಗುರುಮಲ್ಲೇಶ್ವರ ಇಂಜಿನೀಯರ್ ವರ್ಕ್ &ಮೊಟಾರ್ ರಿವೈಂಡಿಂಗ್ | 84864.00 | 32382 | 25-05-2017 |
| 3 | ಮಾತಾಜಿ ಎಲೆಕ್ಟ್ರಿಕಲ್ಸ & ಹಾರ್ಡ್‌ವೇರ್ಸ್ | 10000.00 | 32384 | 25-05-2017 |
| 4 | ರಾಜೇಶ್ ಎಲೆಕ್ಟ್ರಿಕಲ್ಸ್ &ಹಾರ್ಡ್‌ವೇರ್ಸ್ | 74911.00 | 32378 | 28-04-2017 |
| 5 | ರಾಜೇಶ್ ಎಲೆಕ್ಟ್ರಿಕಲ್ಸ್ &ಹಾರ್ಡ್‌ವೇರ್ಸ್ | 40000.00 | 32379 | 28-04-2017 |
| 6 | ಮಾತಾಜಿ ಎಲೆಕ್ಟ್ರಿಕಲ್ಸ & ಹಾರ್ಡ್‌ವೇರ್ಸ್ | 21650.00 | 32376 | 28-04-2017 |
| 7 | ಮಾತಾಜಿ ಎಲೆಕ್ಟ್ರಿಕಲ್ಸ & ಹಾರ್ಡ್‌ವೇರ್ಸ್ | 5000.00 | 32377 | 28-04-2017 |
| 8 | ಯು.ಪಿ.ಎಸ್. ಖರೀದಿ( ಸನ್ ಜೋನ್ ಸೋಲಾರ್ ಸಿಸ್ಟಮ್) | 41000.00 | 32393 | 14.07.2017 |
| 9 | ರಾಜೇಶ್ ಎಲೆಕ್ಟ್ರಿಕಲ್ಸ್ &ಹಾರ್ಡ್‌ವೇರ್ಸ್ | 66461.00 | 32395 | 14-07-2017 |
| 10 | ರಾಜೇಶ್ ಎಲೆಕ್ಟ್ರಿಕಲ್ಸ್ &ಹಾರ್ಡ್‌ವೇರ್ಸ್ | 22834.00 | 32399 | 03-08-2017 |
| 11 | ಗುರುಮಲ್ಲೇಶ್ವರ ಇಂಜಿನೀಯರ್ ವರ್ಕ್ &ಮೊಟಾರ್ ರಿವೈಂಡಿಂಗ್ | 42200.00 | 32401 | 09-08-2017 |
| 12 | ವಿ.ಎಸ್.ಎಸ್. (ಅರ್ಥೇಶ್ವರ) | 7010.00 | 32400 | 08-08-2017 |
| 13 | ರಾಜೇಶ್ ಎಲೆಕ್ಟ್ರಿಕಲ್ಸ್ &ಹಾರ್ಡ್‌ವೇರ್ಸ್ | 81672.00 | 32406 | 08-09-2017 |
| 14 | ರಾಜೇಶ್ ಎಲೆಕ್ಟ್ರಿಕಲ್ಸ್ &ಹಾರ್ಡ್‌ವೇರ್ಸ್ | 88384.00 | 32408 | 28-09-2017 |
| 15 | ರಾಜೇಶ್ ಎಲೆಕ್ಟ್ರಿಕಲ್ಸ್ &ಹಾರ್ಡ್‌ವೇರ್ಸ್ | 68480.00 | 32404 | 01-09-2017 |
| 16 | ರಾಜೇಶ್ ಎಲೆಕ್ಟ್ರಿಕಲ್ಸ್ &ಹಾರ್ಡ್‌ವೇರ್ಸ್ | 69665.00 | 32409 | 16-10-2017 |
| 17 | ರಾಜೇಶ್ ಎಲೆಕ್ಟ್ರಿಕಲ್ಸ್ &ಹಾರ್ಡ್‌ವೇರ್ಸ್ | 164900.00 | 32413 | 22-11-2017 |
| 18 | ರಾಜೇಶ್ ಎಲೆಕ್ಟ್ರಿಕಲ್ಸ್ &ಹಾರ್ಡ್‌ವೇರ್ಸ್ | 8100.00 | 32419 | 27-12-2017 |
| 19 | ಗುರುಮಲ್ಲೇಶ್ವರ ಇಂಜಿನೀಯರ್ ವರ್ಕ್ & ಮೊಟಾರ್ ರಿವೈಂಡಿಂಗ್ | 95850.00 | 32414 | 06-12-2017 |
| 20 | ರಾಜೇಶ್ ಎಲೆಕ್ಟ್ರಿಕಲ್ಸ್ &ಹಾರ್ಡ್‌ವೇರ್ಸ್ | 25600.00 | 32418 | 27-12-2017 |
| 21 | ರಾಜೇಶ್ ಎಲೆಕ್ಟ್ರಿಕಲ್ಸ್ &ಹಾರ್ಡ್‌ವೇರ್ಸ್ | 56600.00 | 32417 | 27-12-2017 |
| 22 | ಹಾಲೆಂಡ್ ಇನ್ಫೋಟೆಕ್ | 79000.00 | 32394 | 17-07-2017 |
| ಒಟ್ಟು | | **1380796.00** | | |

**4) ಅನುಷ್ಠಾನಗೊಳಿಸಿರುವ ಕಾಮಗಾರಿಗಳ ಕ್ರಮಬದ್ಧವಲ್ಲದ ಪೋಟೋಗಳು :**

14ನೇ ಹಣಕಾಸು ಯೋಜನೆಯ 2016-17 ನೇ ಮೊದಲನೇ ಮತ್ತು ಎರಡನೇ ಕಂತುಗಳು ಹಾಗೂ 2017-18 ನೇ ಸಾಲಿನ ಮೊದಲನೇ ಕಂತುಗಳ ಅನುದಾನದ ಹಣದಲ್ಲಿ ಮಾಡಿರುವ ಒಟ್ಟು 19 ಕಾಮಗಾರಿಗಳ ಬಿಲ್ಲುಗಳನ್ನು ಪರಿಶೀಲಿಸಲಾಗಿ, ಕಾಮಗಾರಿಗಳನ್ನು

ಪ್ರಾರಂಭಿಸುವ ಮುನ್ನ, ಪ್ರಗತಿಯಲ್ಲಿರುವ ಹಂತದಲ್ಲಿ ಹಾಗೂ ಪೂರ್ಣಗೊಂಡ ನಂತರ ಪೋಟೋಗಳನ್ನು ತೆಗೆದು ದಾಖಲಿಡಬೇಕಾಗಿರುವುದಾಗಿ ನಿಯಮವಿದ್ದರೂ, ಕಾಮಗಾರಿಗಳ ಮೊದಲ ಹಂತದ ಪೊಟೋ, ಕಾಮಗಾರಿ ನಡೆಯುವಾಗ ಮಧ್ಯಂತರ ಹಂತದ ಪೊಟೋ ಹಾಗೂ ಕಾಮಗಾರಿ ಸಂಪೂರ್ಣವಾಗಿ ಮುಗಿದ ನಂತರ ಮುಕ್ತಾಯ ಹಂತದ ಪೊಟೋಗಳು ಬಹುತೇಕ ಕಾಮಗಾರಿಗಳಲ್ಲಿ ಕಂಡು ಬಂದಿರುವುದಿಲ್ಲ. ಸಲ್ಲಿಸಿಕೊಂಡಿರುವ ಕಾಮಗಾರಿಗಳ ಬಿಲ್ಲುಗಳಲ್ಲಿ ಬಹುತೇಕ ಬಿಲ್ಲುಗಳಲ್ಲಿ ಮೊದಲ ಹಾಗೂ ಕೊನೆಯ ಹಂತದ ಪೋಟೋಗಳು ಮಾತ್ರ ಇದ್ದು, ಕಾಮಗಾರಿ ನಡೆಯುವ ಹಂತದ ಮಧ್ಯಂತರದ ಪೊಟೋಗಳನ್ನು ದಾಖಲಿಟ್ಟಿರುವುದಿಲ್ಲ. ಸದರಿ ಕಾಮಗಾರಿಗಳ ಪೊಟೋಗಳಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ಮತ್ತು ಸಂಬಂಧಪಟ್ಟ ಇಂಜಿನಿಯರ್ ರವರುಗಳ ದೃಢೀಕೃತ ಸಹಿಗಳನ್ನು ಮಾಡದೇ ಇರುವುದು ದಾಖಲಾತಿಗಳಲ್ಲಿ ಕಂಡು ಬಂದಿರುತ್ತದೆ.

ನಂತರ ಸದರಿ ದೂರು ಅರ್ಜಿಯ ವಿಚಾರಣೆಯ ಸಂಬಂಧವಾಗಿ ದಿನಾಂಕ: 02-05-2019 ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಚಾಮರಾಜನಗರ ರವರಿಗೆ 2015-16 ನೇ ಸಾಲಿನಿಂದ ಇಲ್ಲಿಯವರೆಗೆ ವಡ್ಡಗೆರೆ ಗ್ರಾಮ ಪಂಚಾಯಿತಿಯ 14 ನೇ ಹಣಕಾಸು ಯೋಜನೆಯಡಿಯಲ್ಲಿ ನಿರ್ವಹಿಸಿರುವ ಕಾಮಗಾರಿಗಳ ಹಾಗೂ ಖರೀದಿಸಿರುವ ಸಾಮಾಗ್ರಿಗಳ ವಿವರಗಳನ್ನು ಗಾಂಧಿ ಸಾಕ್ಷಿಕಾಯಕ ಮತ್ತು ಪಂಚತಂತ್ರಾಂಶದಲ್ಲಿ ಅಳವಡಿಸಿರುವ ಬಗ್ಗೆ ಮಾಹಿತಿಯನ್ನು ನೀಡುವಂತೆ ಕೋರಿ ಪತ್ರ ವ್ಯವಹರಿಸಲಾಗಿರುತ್ತೆ.

ನಂತರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ವಡ್ಡಗೆರೆ ಗ್ರಾಮ ಪಂಚಾಯಿತಿ, ವಡ್ಡಗೆರೆ ರವರ ಪತ್ರ ಸಂ: ವ.ಗ್ರಾ.ಪಂ.ಸಂ./ಲೋಕ/02/2019-20, ದಿ:06-05-2019 ರಲ್ಲಿ 14 ನೇ ಹಣಕಾಸು ಯೋಜನೆಯಡಿಯಲ್ಲಿ ನಿರ್ವಹಿಸಿರುವ ಕಾಮಗಾರಿಗಳ ಹಾಗೂ ಖರೀದಿಸಿರುವ ಸಾಮಾಗ್ರಿಗಳ ವಿವರಗಳನ್ನು ಗಾಂಧಿ ಸಾಕ್ಷಿಕಾಯಕ ಮತ್ತು ಪಂಚತಂತ್ರಾಂಶದಲ್ಲಿ ಅಳವಡಿಸಿರುವ ಬಗ್ಗೆ ಮಾಹಿತಿಯನ್ನು ನೀಡಿದ್ದು ಪರಿಶೀಲಿಸಲಾಗಿ 14 ನೇ ಹಣಕಾಸು ಯೋಜನೆಯ 2016-17 ನೇ ಮೊದಲನೇ ಮತ್ತು ಎರಡನೇ ಕಂತುಗಳು ಹಾಗೂ 2017-18 ನೇ ಸಾಲಿನ ಮೊದಲನೇ ಕಂತುಗಳ ಅನುದಾನದ ಹಣದಲ್ಲಿ ಮಾಡಿರುವ ಒಟ್ಟು 19 ಕಾಮಗಾರಿಗಳ ವಿವರಗಳನ್ನು ಹಾಗೂ ರೂ. 12,94,679.00 ಗಳಲ್ಲಿ ಖರೀದಿಸಿರುವ ಸಾಮಾಗ್ರಿಗಳ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ಹಾಗೂ ಪಂಚ ತಂತ್ರಾಂಶದಲ್ಲಿ ದಾಖಲಿಸದೇ ಇರುವುದಾಗಿ ವರದಿಯನ್ನು ನೀಡಿರುತ್ತಾರೆ. ಸದರಿ 19 ಕಾಮಗಾರಿಗಳ ವಿವರಗಳನ್ನು ಕಾಮಗಾರಿಗಳ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸಿದ ನಂತರವೇ ಬಿಲ್ಲುಗಳನ್ನು ಪಾವತಿಸಲು ನಿಯಮವಿದ್ದರೂ, 14 ನೇ ಹಣಕಾಸು ಯೋಜನೆಯ 2016-17 ನೇ ಸಾಲಿನ ಮೊದಲ ಮತ್ತು ಎರಡನೇ ಕಂತಿನ ಹಾಗೂ 2017-18 ನೇ ಸಾಲಿನ ಮೊದಲ ಕಂತುಗಳಲ್ಲಿ ನಿರ್ವಹಿಸಿರುವ ಕಾಮಗಾರಿಗಳ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ನಮೂದಿಸದೇ ಬಿಲ್ಲುಗಳನ್ನು ಪಾವತಿಸಿ ನಿಯಮವನ್ನು ಪಾಲಿಸದಿರುವುದು ಹಾಗೂ ಕ್ರಿಯಾ ಯೋಜನೆಗಳಲ್ಲಿನ ಕಾಮಗಾರಿಗಳ ವಿವರಗಳನ್ನು ಪಂಚತಂತ್ರಾಂಶದಲ್ಲಿ ಅಳವಡಿಸಲು ನಿಯಮವಿದ್ದರೂ, 14 ನೇ ಹಣಕಾಸು ಯೋಜನೆಯ 2016-17 ನೇ ಸಾಲಿನ ಮೊದಲ ಮತ್ತು ಎರಡನೇ ಕಂತಿನ ಹಾಗೂ 2017-18 ನೇ

ಸಾಲಿನ ಮೊದಲ ಕಂತುಗಳಲ್ಲಿನ ಕಾಮಗಾರಿಗಳ ವಿವರಗಳನ್ನು ಪಂಚತಂತ್ರಾಂಶದಲ್ಲಿ ಅಳವಡಿಸದೇ ನಿಯಮಗಳನ್ನು ಉಲ್ಲಂಘಿಸಿರುವುದು ದಾಖಲೆಗಳ ಪರಿಶೀಲನೆಯಿಂದ ಕಂಡು ಬಂದಿರುತ್ತದೆ.

ನಂತರ ಸದರಿ ದೂರು ಅರ್ಜಿಯ ವಿಚಾರಣೆಯ ಸಂಬಂಧವಾಗಿ ದಿನಾಂಕ: 24-05-2019 ರಂದು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಗುಂಡ್ಲುಪೇಟೆ ರವರಿಗೆ ವಡ್ಡಗೆರೆ ಗ್ರಾಮ ಪಂಚಾಯಿತಿಯ 14 ನೇ ಹಣಕಾಸು ಯೋಜನೆಯಡಿಯಲ್ಲಿ ಕೆಲವು ಕಾಮಗಾರಿಗಳು ಪುನರಾವರ್ತಿತವಾಗಿರುವ ಬಗ್ಗೆ ಮಾಹಿತಿಯನ್ನು ನೀಡುವಂತೆ ಕೋರಿ ಪತ್ರ ವ್ಯವಹರಿಸಲಾಗಿರುತ್ತೆ.

ನಂತರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ವಡ್ಡಗೆರೆ ಗ್ರಾಮ ಪಂಚಾಯಿತಿ, ವಡ್ಡಗೆರೆ ರವರ ಪತ್ರ ಸಂ: ವ.ಗ್ರಾ.ಪಂ.ಸಂ./ಲೋಕ/03/2019-20, ದಿ: 25-05-2019 ರಲ್ಲಿ ಪುನರಾವರ್ತನೆಯಾಗಿರುವ ಕಾಮಗಾರಿಗಳ ಬಗ್ಗೆ ಮಾಹಿತಿ ನೀಡಿದ್ದು, ಪರಿಶೀಲಿಸಲಾಗಿ 14 ನೇ ಹಣಕಾಸು ಯೋಜನೆಯಡಿಯ 2016-17 ನೇ ಮೊದಲನೇ ಮತ್ತು ಎರಡನೇ ಕಂತುಗಳು ಹಾಗೂ 2017-18 ನೇ ಸಾಲಿನ ಮೊದಲನೇ ಕಂತುಗಳ ಅನುದಾನದ ಹಣದಲ್ಲಿ ಮಾಡಿರುವ ಒಟ್ಟು 19 ಕಾಮಗಾರಿಗಳ ಕ್ರಿಯಾ ಯೋಜನೆಗಳನ್ನು ಪರಿಶೀಲಿಸಲಾಗಿ, ಅದರಲ್ಲಿ 2016-17 ನೇ ಸಾಲಿನ ಕ್ರಿಯಾಯೋಜನೆಯಲ್ಲಿರುವ 06 ಕಾಮಗಾರಿಗಳು 2017-18ರ ಸಾಲಿನ ಮೊದಲ ಕ್ರಿಯಾಯೋಜನೆಯಲ್ಲಿಯು ಸಹ ಪುನರಾವರ್ತನೆಯಾಗಿದ್ದು, ಆದರೆ ಒಂದು ಬಾರಿ ಮಾತ್ರ ಹಣ ಪಾವತಿ ಮಾಡಿರುವುದು ಕಂಡು ಬಂದಿರುತ್ತದೆ.

**ಕ್ರಿಯಾ ಯೋಜನೆಯಲ್ಲಿ ಪುನರಾವರ್ತನೆಯಾಗಿರುವ 06 ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿವೆ :**

1) **ಹೆಗ್ಗವಾಡಿ ಗ್ರಾಮದ ಪ.ಜಾತಿ ಬೀದಿಯಲ್ಲಿ ಗ್ರಾವೆಲ್ ಹಾಕುವುದು :** (2016-17 ರಲ್ಲಿ 52000.00 ರೂಗಳು, 2017-78 ರ ಮೊದಲ ಕಂತಿನ ಕ್ರಿಯಾ ಯೋಜನೆಯಲ್ಲಿ 52000.00 ರೂಗಳು)
2) **ಯರಿಯೂರು ಗ್ರಾಮದ ಪ.ಜಾತಿ ಬೀದಿಯಲ್ಲಿ ಗ್ರಾವೆಲ್ ಹಾಕುವುದು :** (2016-17 ರಲ್ಲಿ 28000.00 ರೂಗಳು, 2017-78 ರ ಮೊದಲ ಕಂತಿನ ಕ್ರಿಯಾ ಯೋಜನೆಯಲ್ಲಿ 37000.00 ರೂಗಳು
3) **ದಾರಿ ಬೇಗೂರು ಗ್ರಾಮದಲ್ಲಿ ಗ್ರಾವೆಲ್ ಹಾಕುವುದು :** (2016-17 ರಲ್ಲಿ 52000.00 ರೂಗಳು, 2017-78 ರ ಮೊದಲ ಕಂತಿನ ಕ್ರಿಯಾ ಯೋಜನೆಯಲ್ಲಿ 52000.00 ರೂಗಳು)
4) **ದಾರಿ ಬೇಗೂರು ಗ್ರಾಮದಲ್ಲಿ ಚರಂಡಿ ಹೂಳೆತ್ತುವುದು ಮತ್ತು ಗ್ರಾಮದಲ್ಲಿ ಗ್ರಾವೆಲ್ ಹಾಕುವುದು :** (2016-17 ರಲ್ಲಿ 52000.00 ರೂಗಳು, 2017-18 ರ ಮೊದಲ ಕಂತಿನ ಕ್ರಿಯಾ ಯೋಜನೆಯಲ್ಲಿ 52000.00 ರೂಗಳು)

5) **ಚಿರಕನಹಳ್ಳಿ ಗ್ರಾಮದಲ್ಲಿ ಹೊಸದಾಗಿ ಕೊರೆದಿರುವ ಬೋರ್‌ವೆಲ್ಲಗೆ ಫೈಪ್ ಲೈನ್ ಕಾಮಗಾರಿ ಮತ್ತು ಕುಡಿಯುವ ನೀರಿನ ನಿರ್ವಹಣೆ** : (2016–17 ರಲ್ಲಿ 211000.00 ರೂಗಳು, 2017–78 ರ ಮೊದಲ ಕಂತಿನ ಕ್ರಿಯಾ ಯೋಜನೆಯಲ್ಲಿ 164900.00 ರೂಗಳು)

6) **ಕರಕಲ ಮಾದಳ್ಳಿ ಗ್ರಾಮದಲ್ಲಿ ಚರಂಡಿ ಹೂಳೆತ್ತುವುದು** : (2016–17ರಲ್ಲಿ 30000.00ರೂ, 2017–78 ರ ಮೊದಲ ಕಂತಿನ ಕ್ರಿಯಾ ಯೋಜನೆಯಲ್ಲಿ 68000.00 ರೂಗಳು)

<u>ವಿಚಾರಣಾಧಿಕಾರಿಯವರ ಅಭಿಪ್ರಾಯ</u> ಃ

ದೂರುದಾರರಾದ ಶ್ರೀ.ಚನ್ನಬಸವರಾಜಪ್ಪ, ಗ್ರಾಮ ಪಂಚಾಯಿತಿ ಸದಸ್ಯರು, ವಡ್ಡಗೆರೆ ಗ್ರಾಮ, ಗುಂಡ್ಲುಪೇಟೆ ತಾಲ್ಲೂಕು ರವರು ದಿನಾಂಕ:26–03–2018 ರಂದು ಸಲ್ಲಿಸಿದ್ದ ದೂರಿಗೆ ಸಂಬಂದಿಸಿದಂತೆ ವಡ್ಡಗೆರೆ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರಾದ ಶ್ರೀ.ಬಿ.ಸಿ.ಸುದರ್ಶನ್ ರವರು ಲಗತ್ತಿಸಿರುವ ಸಮಜಾಯಿಸಿ ಕಡತದ ಪರಿಶೀಲನೆಯಿಂದ ಹಾಗೂ ದೂರುದಾರರು ದಿನಾಂಕ:13–09–2018 ರಂದು ಸಲ್ಲಿಸಿರುವ ದೂರು ಅರ್ಜಿಯ ವಿಚಾರಣಾ ಕಾಲದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಗುಂಡ್ಲುಪೇಟೆ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ವಡ್ಡಗೆರೆ ಗ್ರಾಮ ಪಂಚಾಯಿತಿ ರವರುಗಳಿಂದ ಸಂಗ್ರಹಿಸಿದ ದಾಖಲಾತಿಗಳ ಪರಿಶೀಲನೆಯಿಂದ ಕಂಡು ಬಂದಿರುವುದೇನೆಂದರೆ ವಡ್ಡಗೆರೆ ಗ್ರಾಮ ಪಂಚಾಯಿತಿಯಲ್ಲಿ ದಿನಾಂಕ:20–03–2017 ರಿಂದ 26–12–2017 ರವರೆಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಆಗಿ ಕರ್ತವ್ಯ ನಿರ್ವಹಿಸಿದ್ದ ಶ್ರೀ ಡಿ.ರವಿ ಹಾಗೂ 01–05–2015 ರಿಂದ ಇಲ್ಲಿಯವರೆಗೆ ಅಧ್ಯಕ್ಷರಾಗಿರುವ ಶ್ರೀಮತಿ ನಾಗಮ್ಮ ರವರುಗಳು 14 ನೇ ಹಣಕಾಸು ಯೋಜನೆಯ 2016–17 ನೇ ಸಾಲಿನ ಮೊದಲ ಮತ್ತು ಎರಡನೇ ಕಂತಿನ ಹಾಗೂ 2017–18 ನೇ ಸಾಲಿನ ಮೊದಲ ಕಂತುಗಳಲ್ಲಿನ ಒಟ್ಟು ಅನುದಾನದ ಹಣದಲ್ಲಿ 19 ಕಾಮಗಾರಿಗಳಿಗೆ ರೂ. 10,05,963.00 ಗಳನ್ನು ಹಾಗೂ ಸಾಮಾಗ್ರಿಗಳ ಖರೀದಿಗೆ ರೂ. 12,94,679.00 ಗಳನ್ನು ವಿನಿಯೋಗಿಸಿರುವುದು ಕಂಡು ಬಂದಿರುತ್ತದೆ. ದಾಖಲಾತಿಗಳನ್ನು ಪರಿಶೀಲಿಸಲಾಗಿ ಕ್ರಿಯಾಯೋಜನೆಗಳ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಲ್ಲಿ ಇಲಾಖಾ ನಿಯಮಗಳನ್ನು ಪಾಲಿಸದೆ ಇರುವುದು ಈ ಕೆಳಕಂಡ ಅಂಶಗಳಿಂದ ಕಂಡು ಬಂದಿರುತ್ತದೆ.

1. 14 ನೇ ಹಣಕಾಸು ಯೋಜನೆಯ 2017–18 ನೇ ಸಾಲಿನ ಮೊದಲ ಕಂತಿನ ಕ್ರಿಯಾ ಯೋಜನೆಯಲ್ಲಿರುವ ಕೆಲವು ಕಾಮಗಾರಿಗಳನ್ನು ನಡೆಸಲು ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಹಾಗೂ ಸಕ್ಷಮ ಪ್ರಾಧಿಕಾರದಿಂದ ಅಂದಾಜುಪಟ್ಟಿಗಳಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ಪಡೆಯುವ ಮುಂಚಿತವಾಗಿಯೇ ಏಪ್ರಿಲ್–2017 ರಿಂದ ಡಿಸೆಂಬರ್–2017 ರ ನಡುವಿನ ಅವಧಿಯಲ್ಲಿಯೆ ನಿರ್ವಹಿಸಿ, ನಂತರ ಸದರಿ ಕಾಮಗಾರಿಗಳಿಗೆ ಘಟನೋತ್ತರ ಅನುಮತಿ ಪಡೆದಿರುವುದು ದಾಖಲಾತಿಗಳ ಪರಿಶೀಲನೆಯಿಂದ ಕಂಡುಬಂದಿರುತ್ತದೆ.

2. 14 ನೇ ಹಣಕಾಸು ಯೋಜನೆಯ 2016–17 ನೇ ಸಾಲಿನ ಕ್ರಿಯಾಯೋಜನೆಯಲ್ಲಿರುವ ಕಾಮಗಾರಿಗಳ ಪೈಕಿ 06 ಕಾಮಗಾರಿಗಳು 2017–18ರ ಸಾಲಿನ ಮೊದಲ

ಕ್ರಿಯಾಯೋಜನೆಯಲ್ಲಿಯು ಸಹ ಪುನರಾವರ್ತನೆಯಾಗಿದ್ದು, ಆದರೆ ಒಂದು ಬಾರಿ ಮಾತ್ರ ಹಣ ಪಾವತಿ ಮಾಡಿರುವುದು ಕಂಡು ಬಂದಿರುತ್ತದೆ.

3. ಕ್ರಿಯಾ ಯೋಜನೆಗಳಲ್ಲಿನ ಕಾಮಗಾರಿಗಳ ವಿವರಗಳನ್ನು ಪಂಚತಂತ್ರಾಂಶದಲ್ಲಿ ಅಳವಡಿಸಲು ನಿಯಮವಿದ್ದರೂ, 14 ನೇ ಹಣಕಾಸು ಯೋಜನೆಯ 2016–17 ನೇ ಸಾಲಿನ ಮೊದಲ ಮತ್ತು ಎರಡನೇ ಕಂತಿನ ಹಾಗೂ 2017–18 ನೇ ಸಾಲಿನ ಮೊದಲ ಕಂತುಗಳಲ್ಲಿನ ಕಾಮಗಾರಿಗಳ ವಿವರಗಳನ್ನು ಪಂಚತಂತ್ರಾಂಶದಲ್ಲಿ ಅಳವಡಿಸದೇ ನಿಯಮವನ್ನು ಪಾಲಿಸದಿರುವುದು ದಾಖಲಾತಿಗಳ ಪರಿಶೀಲನೆಯಿಂದ ಕಂಡು ಬಂದಿರುತ್ತದೆ.
4. 14 ನೇ ಹಣಕಾಸು ಯೋಜನೆಯಡಿ ನಿರ್ವಹಿಸಿರುವ ಕಾಮಗಾರಿಗಳ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸಿದ ನಂತರವೇ ಬಿಲ್ಲುಗಳನ್ನು ಪಾವತಿಸಲು ನಿಯಮವಿದ್ದರೂ, 14 ನೇ ಹಣಕಾಸು ಯೋಜನೆಯ 2016–17 ನೇ ಸಾಲಿನ ಮೊದಲ ಮತ್ತು ಎರಡನೇ ಕಂತಿನ ಹಾಗೂ 2017–18 ನೇ ಸಾಲಿನ ಮೊದಲ ಕಂತುಗಳಲ್ಲಿ ನಿರ್ವಹಿಸಿರುವ ಕಾಮಗಾರಿಗಳ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ನಮೂದಿಸದೇ ಬಿಲ್ಲುಗಳನ್ನು ಪಾವತಿಸಿ ನಿಯಮವನ್ನು ಪಾಲಿಸದಿರುವುದು ದಾಖಲಾತಿಗಳ ಪರಿಶೀಲನೆಯಿಂದ ಕಂಡು ಬಂದಿರುತ್ತದೆ.
5. 14 ನೇ ಹಣಕಾಸು ಯೋಜನೆಯ 2016–17 ನೇ ಸಾಲಿನ ಮೊದಲ ಮತ್ತು ಎರಡನೇ ಕಂತಿನ ಹಾಗೂ 2017–18 ನೇ ಸಾಲಿನ ಮೊದಲ ಕಂತುಗಳಲ್ಲಿನ ಅನುದಾನದ ಹಣದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗಿಂತಲೂ ಸಾಮಾಗ್ರಿಗಳ ಖರೀದಿಗೆ ಹೆಚ್ಚಾಗಿ ಹಣ ಖರ್ಚು ಮಾಡಿರುತ್ತಾರೆ. 2017–18 ನೇ ಸಾಲಿನ ಮೊದಲ ಕಂತಿನ ಕ್ರಿಯಾ ಯೋಜನೆಯಲ್ಲಿರುವ ಕಾಮಗಾರಿಗಳ ಪೈಕಿ ಕೇವಲ 03 ಕಾಮಗಾರಿಗಳನ್ನಷ್ಟೆ ನಿರ್ವಹಿಸಿ ಉಳಿದ ಕಾಮಗಾರಿಗಳ ಕೆಲಸ ನಿರ್ವಹಿಸದಿರುವುದು ಕಂಡುಬಂದಿರುತ್ತದೆ.

6. 14 ನೇ ಹಣಕಾಸು ಯೋಜನೆಯ 2016–17 ನೇ ಸಾಲಿನ ಮೊದಲ ಮತ್ತು ಎರಡನೇ ಕಂತಿನ ಹಾಗೂ 2017–18 ನೇ ಸಾಲಿನ ಮೊದಲ ಕಂತುಗಳ ಅನುದಾನದಲ್ಲಿ ನಿರ್ವಹಿಸಿರುವ ಕೆಲವು ಕಾಮಗಾರಿಗಳ ಬಿಲ್ಲುಗಳಲ್ಲಿ 03 ಹಂತದ ಪೋಟೋಗಳು ಇರುವುದಿಲ್ಲ ಹಾಗೂ ಪೋಟೋಗಳಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ಮತ್ತು ಸಂಬಂಧಪಟ್ಟ ಇಂಜಿನಿಯರ್ ರವರುಗಳು ಸಹಿಗಳನ್ನು ಮಾಡದೇ ಇರುವುದು ದಾಖಲಾತಿಗಳಲ್ಲಿ ಕಂಡು ಬಂದಿರುತ್ತದೆ.

7. 14 ನೇ ಹಣಕಾಸು ಯೋಜನೆಯ 2016–17 ನೇ ಸಾಲಿನ ಮೊದಲ ಮತ್ತು ಎರಡನೇ ಕಂತಿನ ಹಾಗೂ 2017–18 ನೇ ಸಾಲಿನ ಮೊದಲ ಕಂತುಗಳ ಅನುದಾನದಲ್ಲಿ ಸಾಮಾಗ್ರಿಗಳ ಖರೀದಿಯ ಬಿಲ್ಲುಗಳಲ್ಲಿ ಚೆಕ್‌ನ ನಂಬರ್ ಹಾಗೂ ಹಣ ಸ್ವೀಕರಿಸಿದವರಿಂದ ಸ್ವೀಕೃತಿ ಪತ್ರಗಳು ಇರುವುದಿಲ್ಲ.

ವಿಚಾರಣಾ ಕಾಲದಲ್ಲಿ ಒಟ್ಟಾರೆಯಾಗಿ 14 ನೇ ಹಣಕಾಸು ಯೋಜನೆಯ 2016–17 ನೇ ಸಾಲಿನ ಮೊದಲ ಮತ್ತು ಎರಡನೇ ಕಂತಿನ ಹಾಗೂ 2017–18 ನೇ ಸಾಲಿನ ಮೊದಲ ಕಂತುಗಳ ಅನುದಾನದ ಕ್ರಿಯಾಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ವಡ್ಡಗೆರೆ ಗ್ರಾಮ ಪಂಚಾಯಿತಿಯ

ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ. ಡಿ.ರವಿ ಹಾಗೂ ಹಾಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿರುವ ಶ್ರೀಮತಿ ನಾಗಮ್ಮ ರವರುಗಳು ನಿರ್ದೇಶಕರು (ಪಂ.ರಾಜ್-2) ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ : ಗ್ರಾಅಪ75ಗ್ರಾಪಸ2015, ದಿನಾಂಕ:17-03-2017 ರವರ ಹಾಗೂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾಪಂಚಾಯಿತಿ, ಚಾಮರಾಜನಗರರವರ ಅಧಿಕೃತ ಜ್ಞಾಪನಸಂಖ್ಯೆ: ಜಿ.ಪಂ.ಚಾ:ಯೋಶಾ:ಪಿಆರ್:34:2018-19, ದಿನಾಂಕ:22-06-2018 ರಲ್ಲಿನ ಆದೇಶದ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸದಿರುವುದು ದಾಖಲಾತಿಗಳ ಪರಿಶೀಲನೆಯಿಂದ ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಸದರಿ ಅರ್ಜಿ ವಿಚಾರಣೆಯ ವರದಿಯನ್ನು ಮುಂದಿನ ಕ್ರಮದ ಬಗ್ಗೆ ತಮ್ಮ ಅವಗಾಹನೆಗಾಗಿ ನಿವೇದಿಸಿಕೊಂಡಿರುತ್ತೇನೆ.

4) Based on the report of the Investigation Officer, the respondent No.3 has been impeaded and he was asked to submit his comments. The respondent No.3 has submitted his comments, wherein he has denied and disputed the allegations made against him.

5) Subsequently, the copy of the report dtd:5-12-2018 submitted by the Executive Officer, Taluk Panchayath, Gundlupete, to the CEO, Zilla Panchayath, Chamarajanagar was received. The said report reads here as under;

ಸಂ.ತಾಪಂಗು/ಆಡಳಿತ/ಸಿಬ್ಬಂದಿ/2018-19 ದಿ:5-12-2018

ಗೆ,
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್,
ಚಾಮರಾಜನಗರ.

ಮಾನ್ಯರೆ,

ವಿಷಯ: ಶ್ರೀ.ಚೆನ್ನಬಸವರಾಜಪ್ಪ, ಗ್ರಾಮ ಪಂಚಾಯಿತಿ ಸದಸ್ಯರು, ವಡ್ಡಗೆರೆ, ರವರು ನೀಡಿರುವ ದೂರು ಅರ್ಜಿಯ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸುತ್ತಿರುವ ಕುರಿತು.

ಉಲ್ಲೇಖ: 1. ತಮ್ಮ ಕಚೇರಿ ಪತ್ರ ಸಂ.ಜಿಪಂಚಾ/ಯೋ.ಶಾ/ಪಿ.ಆರ್/22/2018-19, ದಿ:3-9-2018.
2. ಈ ಕಚೇರಿ ಪತ್ರ ಸಂ.ತಾಪಂಗು/ಆಡಳಿತ/ಸಿಬ್ಬಂದಿ/2018-19, ದಿ:3-9-2018.

****

ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಶ್ರೀ.ಚೆನ್ನಬಸವರಾಜಪ್ಪ, ಗ್ರಾಮ ಪಂಚಾಯಿತಿ ಸದಸ್ಯರು, ವಡ್ಡಗೆರೆ, ರವರು ನೀಡಿರುವ ದೂರು ಅರ್ಜಿಯ ಮೇಲೆ ತನಿಖಾ ತಂಡ ರಚಿಸಿ 2016-17 ಮತ್ತು 2017-18ನೇ ಸಾಲಿನ 14ನೇ ಹಣಕಾಸು ಯೋಜನೆ ಅನುದಾನದ ಬಳಕೆಯ ಬಗ್ಗೆ ಪರಿಶೀಲಿಸಿ ವರದಿ ನೀಡುವಂತೆ ತಿಳಿಸಲಾಗಿತ್ತು. ತನಿಖಾ ತಂಡವು ಲಭ್ಯವಿದ್ದ ದಾಖಲಾತಿಗಳನ್ನು ಪರಿಶೀಲಿಸಿ ವರದಿಯನ್ನು ನೀಡಿರುತ್ತಾರೆ. ವರದಿಯನ್ನು ಪರಿಶೀಲಿಸಿದ್ದು, ಮಾರ್ಗಸೂಚಿ ಮತ್ತು ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದೇ ಇರುವುದು ಕಂಡುಬಂದಿರುತ್ತದೆ. ಕರ್ನಾಟಕ ಪಾರದರ್ಶಕ ನಿಯಮ 2000ದ ರೀತ್ಯಾ ಖರೀದಿ ಪ್ರಕ್ರಿಯೆ ಮಾಡಬೇಕಾಗಿರುತ್ತದೆ ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವಲ್ಲಿ ನಿಯಮವನ್ನು ಪಾಲಿಸಬೇಕಾಗಿರುತ್ತದೆ. ಆದರೆ, ನಿಯಮಾವಳಿಯನ್ನು ಪಾಲಿಸದೇ ಇರುವುದು, ತನಿಖಾ ವರದಿಯಲ್ಲಿ ಕಂಡುಬಂದಿರುತ್ತದೆ.

ತಮ್ಮ ಮೌಖಿಕ ಆದೇಶದಂತೆ ಧನಾದೇಶಗಳನ್ನು ಕ್ರಮಬದ್ಧಗೊಳಿಸಿ, ತನಿಖಾ ವರದಿಯನ್ನು ಪುನರ್ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಕಾರ್ಯನಿರ್ವಾಹಕ ಅಧಿಕಾರಿಗಳು,
ತಾಲ್ಲೂಕು ಪಂಚಾಯತ್, ಗುಂಡ್ಲುಪೇಟೆ.

**ಅಡಕ:**
1.ತನಿಖಾ ವರದಿ ಲಗತ್ತಿಸಿದೆ.

**ತನಿಖಾ ವರದಿ**

ವಡ್ಡಗೆರೆ ಗ್ರಾಮ ಪಂಚಾಯಿತಿಯ ಸದಸ್ಯರಾದ ಶ್ರೀ ಚೆನ್ನಬಸವರಾಜಪ್ಪ ರವರು ದಿನಾಂಕ: 15-02-2018 ರಲ್ಲಿ ದೂರು ಅರ್ಜಿ ನೀಡಿ 2016-17 ಮತ್ತು 2017-18 ನೇ ಸಾಲಿನಲ್ಲಿ 14ನೇ ಹಣಕಾಸುಯೋಜನೆಯಲ್ಲಿ ನಿಯಮ ಬಾಹಿರವಾಗಿ ಅನುದಾನ ದುರುಪಯೋಗವಾಗಿರುವ ಬಗ್ಗೆ ದೂರು ನೀಡಿರುತ್ತಾರೆ. ಈ ಬಗ್ಗೆ ತಾಲ್ಲೂಕು ಪಂಚಾಯಿತಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ತಂಡ 3 ಬಾರಿ ವಡ್ಡಗೆರೆ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಹಾಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರಿಗೆ ಸಂಬಂಧಿಸಿದ ದಾಖಲಾತಿ ಮತ್ತು ಕಡತಗಳನ್ನು ಹಾಜರುಪಡಿಸಲು ತಿಳಿಸಲಾಯಿತು.ಆದರೆ 3 ನೋಟೀಸ್ ಜಾರಿ ಮಾಡಿ,

ಕಛೇರಿಗೆ ಭೇಟಿ ನೀಡಿದ ಸಮಯದಲ್ಲಿ ಕಡತಗಳು ಲಭ್ಯವಿಲ್ಲದಿರುವುದು ಕಂಡುಬಂದಿರುತ್ತದೆ. ಪಂಚಾಯಿತಿ ಅಭಿವೃದ್ದಿ ಅಧಿಕಾರಿಗಳು ಕಡತಗಳನ್ನು ಲೆಕ್ಕ ಪರಿಶೋಧನೆಗೆ ನೀಡಲಾಗಿದೆ ಎಂದು ತಿಳಿಸಿರುತ್ತಾರೆ. ನಂತರ ದಿನಾಂಕ:28/09/2018 ರಂದು ತಾಲ್ಲೂಕು ಪಂಚಾಯತಿ ಕಛೇರಿಗೆ ಕಡತಗಳನ್ನು ಪರಿಶೀಲನೆಗೆ ಒದಗಿಸಿರುತ್ತಾರೆ.

ಕ್ರಿಯಾ ಯೋಜನೆಗಳನ್ನು ಪರೀಶಿಲಿಸಲಾಗಿದ್ದು ಅದರ ವಿವರ ಈ ಕೆಳಕಂಡಂತಿದೆ.

| ವರ್ಷ | ಪ್ರಾರಂಭಿಕ ಶಿಲ್ಕು | 1ನೇ ಕಂತು | 2ನೇ ಕಂತು | ಒಟ್ಟು |
|---|---|---|---|---|
| 2016–17 | 2.23 | 10.44 | 8.52 | 21.19 |
| 2017–18 | 13.10 | 8.66 | – | 21.76 |

ಸದರಿ ಕಡತಗಳನ್ನು ಪರೀಶಿಲಿಸಲಾಗಿ ಲಭ್ಯವಿರುವ ಅನುದಾನದಲ್ಲಿ ಒಟ್ಟು ರೂ 13.16 ಲಕ್ಷಗಳು ಕುಡಿಯುವ ನೀರು, ಬೀದಿ ದೀಪ ಹಾಗೂ ಇತರ ಸಾಮಾಗ್ರಿಗಳ ಖರೀದಿಗೆ ವೆಚ್ಚ ಭರಿಸಲಾಗಿದೆ. ಆದರೆ ಅನುಮೋದಿತ ಕ್ರಿಯಾಯೋಜನೆಗಳಲ್ಲಿ ಖರೀದಿ ಮತ್ತು ನಿರ್ವಹಣೆಗಾಗಿ 11.00 ಲಕ್ಷಗಳು ಮಾತ್ರ ಮೀಸಲಿಡಲಾಗಿದೆ.

2017–18 ನೇ ಸಾಲಿನ 2 ನೇ ಕಂತಿನ ಅನುದಾನ ಮತ್ತು ಕ್ರಿಯಾಯೋಜನೆ ಬಗ್ಗೆ ಯಾವುದೇ ಮಾಹಿತಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ನೀಡಿರುವ ದಾಖಲೆಗಳಲ್ಲಿ ಲಭ್ಯವಿರುವುದಿಲ್ಲ.

| ಕ್ರ.ಸಂ | ವಿವರ | ಚೆಕ್ ನಂ. | ದಿನಾಂಕ | ಮೊತ್ತ |
|---|---|---|---|---|
| 1 | ರಾಜೇಶ್ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ಸ್ | 32413 | 22-01-2017 | 164900 |
| 2 | ರಾಜೇಶ್ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ಸ್ | 32419 | 27-02-2017 | 8100 |
| 3 | ಮಾತಾಜಿ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ಸ್ | 32376 | 27-04-2017 | 21640 |
| 4 | ಮಾತಾಜಿ ಎಲೆಕ್ಟ್ರಿಕಲ್ಸ್& ಹಾರ್ಡ್‌ವೇರ್ಸ್ | 32377 | 27-04-2017 | 5000 |
| 5 | ಮಾತಾಜಿ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ಸ್ | 32381 | 24-05-2017 | 226615 |
| 6 | ಗುರುಮಲ್ಲೇಶ್ವರ ಇಂಜಿನಿಯರ್ ವರ್ಕ್ ಮತ್ತು ಮೋಟರ್ ವೈಂಡಿಂಗ್ | 32382 | 24-05-2017 | 84864 |
| 7 | ಮಾತಾಜಿ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ಸ್ | 32384 | 24-05-2017 | 10000 |
| 8 | ರಾಜೇಶ್ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ಸ್ | 32395 | 14-07-2017 | 66461 |

| | | | | |
|---|---|---|---|---|
| 9 | ರಾಜೇಶ್ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ಸ್ | 32399 | 03–08–2017 | 22834 |
| 10 | ಗುರುಮಲ್ಲೇಶ್ವರ ಇಂಜಿನಿಯರ್ ವರ್ಕ್ ಮತ್ತು ಮೋಟರ್ ವೈಂಡಿಂಗ್ | 32401 | 09–08–2017 | 42200 |
| 11 | ವಿ.ಎಸ್.ಎಸ್ | 32400 | 28–08–2017 | 13200 |
| 12 | ರಾಜೇಶ್ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ಸ್ | 32406 | 08–09–2017 | 81627 |
| 13 | ಪ್ರತಿಕೆ ಜಾಹಿರಾತು | 32450 | 11–09–2017 | 12600 |
| 14 | ರಾಜೇಶ್ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ಸ್ | 32408 | 28–09–2017 | 88384 |
| 15 | ರಾಜೇಶ್ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ಸ್ | 32404 | 01–09–2017 | 64480 |
| 16 | ರಾಜೇಶ್ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ಸ್ | – | 16–10–2017 | 69665 |
| 17 | ಗುರುಮಲ್ಲೇಶ್ವರ ಇಂಜಿನಿಯರ್ ವರ್ಕ್ ಮತ್ತು ಮೋಟರ್ ವೈಂಡಿಂಗ್ | 32414 | 06–12–2017 | 95850 |
| 18 | ರಾಜೇಶ್ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ಸ್ | 32418 | 27–12–2017 | 25600 |
| 19 | ರಾಜೇಶ್ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ಸ್ | 32417 | 27–12–2017 | 56600 |
| 20 | ಯು.ಪಿ.ಎಸ್ ಖರೀದಿ | – | – | 41000 |
| 21 | ರಾಜೇಶ್ ಎಲೆಕ್ಟ್ರಿಕಲ್ಸ್ & ಹಾರ್ಡ್‌ವೇರ್ಸ್ | 032379<br>032378 | – | 74911<br>40000 |

2016–17 ಮತ್ತು 2017–18 ಕ್ರಿಯಾಯೋಜನೆಯ ಕಡತದಲ್ಲಿ ಸಾಮಾಗ್ರಿಗಳ ಖರೀದಿಯ ದಾಖಲಾತಿಗಳನ್ನು ಪರಿಶೀಲಿಸಲಾಗಿ ಕ್ರ ಸಂ 09 10 11 ರಲ್ಲಿ ಒಟ್ಟು ಮೊತ್ತ 349477–00 ರೂಗಳಿಗೆ ದಿನಾಂಕದ ಪೂರ್ವಭಾವಿಯಾಗಿ ಚೆಕ್ ಪಾವತಸಿರುವುದು ಕಂಡುಬಂದಿರುತ್ತದೆ. ಹಾಗೂ ಕೊಟೆಷನ್‌ಗಳಲ್ಲಿ ಸಂಸ್ಥೆಯ ಕೊಟೆಷನ್‌ದಾರರ ಸಹಿಗಳಿರುವುದಿಲ್ಲ ಹಾಗೂ ಅಧ್ಯಕ್ಷರ ಸಹಿಗಳು ಇರುವುದಿಲ್ಲ, ಮತ್ತು ಚೆಕ್ ಪಡೆದವರಿಂದ ಯಾವುದೇ ಸ್ವೀಕೃತಿಗಳು ಕಂಡುಬಂದಿರುವುದಿಲ್ಲ ಹಾಗೂ ಖರೀದಿಗೆ ಸಂಬಂಧಪಟ್ಟ ಬಿಲ್ಲುಗಳನ್ನು ಗಾಂಧಿ ಸಾಕ್ಷಿಕಾಯಕದ ತಂತ್ರಾಂಶದಲ್ಲಿ ಅಳವಡಿಸಿರುವ ಬಗ್ಗೆ ಯಾವುದೇ ಮಾಹಿತಿಗಳು ಇರುವುದಿಲ್ಲ. ಹಾಗೂ 2016–17ನೇ ಸಾಲಿನ ಲೆಕ್ಕ ತಪಾಸಣೆಯಯನ್ನು ಈಗಾಗಲೇ ಹಿರಿಯ ಉಪನಿರ್ದೇಶಕರ ಕಛೇರಿ, ಸ್ಥಳೀಯ ಲೆಕ್ಕ

ಪರಿಶೋದನಾ ವರ್ತುಲ ಚಾಮರಾಜನಗರ ರವರ ಲೆಕ್ಕ ತಪಾಸಣೆಯನ್ನು ಪೂರ್ಣಗೊಳಿಸಿ ವರದಿ ನೀಡಿರುತ್ತಾರೆ.

2016-17ನೇ ಮತ್ತು 2017-18ನೇ ಸಾಲಿನ ವಡ್ಡಗೆರೆ ಗ್ರಾಮ ಪಂಚಾಯಿತಿಯ 14ನೇ ಹಣಕಾಸು ಯೋಜನೆಯಡಿ ನಿರ್ವಹಿಸಿರುವ ಕಾಮಗಾರಿಗಳಲ್ಲಿ ಹಾಜರುಪಡಿಸಿರುವ ಕಾಮಗಾರಿ ವಿವರದ ತ.ಖ್ತೆ.

| ಕ್ರ.ಸಂ | ಕಾಮಗಾರಿ ವಿವರ | ಅಂದಾಜು ಮೊತ್ತ | ಗುತ್ತಿಗೆದಾರರ ಹೆಸರು | ಬಿಲ್ಲಿನ ಮೊತ್ತ | ಅ.ತೆ | ಮಾ. ತೆ | ರಾ ನಿಧಿ | ಕಾ ನಿಧಿ | ಅಳತೆ ಪುಸ್ತಕ ಸಂ/ ಪು.ಸಂ | ನಿವ್ವಳ ಮೊತ್ತ | ಧನಾದೇಶ ದಿನಾಂಕ |
|---|---|---|---|---|---|---|---|---|---|---|---|
| 1 | ಹೆಗ್ಗವಾಡಿ ಗ್ರಾಮದಲ್ಲಿ ಪ. ಜಾತಿ ಬೀದಿಯಲ್ಲಿ ಗ್ರಾವೇಲ್ ಹಾಕುವುದು | 0.52 | ಡಿ.ಎಸ್ ಬಸವಣ್ಣ | 51513 | 1030 | 2060 | 3670 | - | 3382/1 | 44753 | 32375 27-04-2017 |
| 2 | ವಡ್ಡಗೆರೆ ಗ್ರಾಮದ ಶಿವಯ್ಯನ ಮನೆಯಿಂದ ಬೆಳ್ಳಯ್ಯನ ಮನೆವರೆಗೆ ಚರಂಡಿ ನಿರ್ಮಾಣ | 0.52 | ಡಿ.ಎಸ್ ಬಸವಣ್ಣ | 51996 | 1040 | 2080 | - | 520 | 33822-3 | 48356 | 32380 12-05-2017 |
| 3 | ಚಿರಕನಹಳ್ಳಿ ಗ್ರಾಮದಲ್ಲಿ ಹೊಸದಾಗಿ ಕೊರೆದಿರುವ ಬೋರ್‌ವೇಲ್‌ಗೆ | 2.11 | ಡಿ.ರವಿ | 179682 | - | - | - | - | 3382/56 | 179682 | 032383 24-05-201 |

| | | | | | | | | | | | |
|---|---|---|---|---|---|---|---|---|---|---|---|
| | ಪೈಪ್‌ಲೈನ್<br>ಕಾಮಗಾರಿ<br>ಮತ್ತು<br>ಕುಡಿಯುವ<br>ನೀರು<br>ನಿರ್ವಹಣೆ | | | | | | | | | | |
| 4 | ಯರಿಯೂ<br>ರು<br>ಗ್ರಾಮದ<br>ಪರಿಶಿಷ್ಟ<br>ಜಾತಿ<br>ಜನಾಂಗದ<br>ಸ್ಮಶಾನ<br>ಅಭಿವೃದ್ಧಿ | 0.32 | ಡಿ.ಎಸ್<br>ಬಸವಣ್ಣ | 3200<br>0 | 640 | 1280 | – | 320 | 3382<br>5–6 | 2976<br>0 | 32387<br>7–06–<br>2017 |
| 5 | ಯರಿಯೂ<br>ರು<br>ಗ್ರಾಮದ<br>ಪ.ಜಾತಿ<br>ಬೀದಿಯಲ್ಲಿ<br>ಚರಂಡಿ<br>ಹೊಳೆತ್ತುವು<br>ದು | 0.15 | ಡಿ.ಎನ್.<br>ಬಸವಣ್ಣ | 1472<br>8 | 295 | 589 | – | 147 | 3382 | 13697 | 32385<br>07–06–<br>2017 |
| 6 | ಯರಿಯೂ<br>ರು<br>ಗ್ರಾಮದ<br>ಮರಿಯಪ್ಪ<br>ನವರ<br>ಮನೆಯಿಂ<br>ದ<br>ಸಾರ್ವಜನಿ<br>ಕ ರಸ್ತೆಗೆ<br>ಗ್ರಾವೇಲ್ | 0.37 | ಡಿ.ಎಸ್<br>ಬಸವಣ್ಣ | 3671<br>4 | 374 | 1468 | – | 367 | 2382<br>4–5 | 34145 | 32386<br>07–06–<br>2017 |

| | | | | | | | | | | |
|---|---|---|---|---|---|---|---|---|---|---|
| | ಹಾಕುವುದು | | | | | | | | | |
| 7 | ಚಿರಕನಹಳ್ಳಿ ಗ್ರಾಮದ ದೇವಸ್ಥಾನ ದಿಮದ ಬಸ್ಸು ನಿಲ್ದಾಣದ ವರಗೆ ಚರಂಡಿ ನಿರ್ಮಾಣ | 0.52 | ಡಿ.ಎಸ್ ಬಸವಣ್ಣ | 51844 | 1036 | 2074 | – | 518 | 3382 / 14–15 | 48216 | 32410 24–06–2017 |
| 8 | ದಾರಿಬೇಗ ೂರು ಗ್ರಾಮದಲ್ಲಿ ಗ್ರಾವೇಲ್ ಹಾಕುವುದು | 0.52 | ಡಿ.ಎಸ್ ಬಸವಣ್ಣ | 51654 | 1033 | 2066 | – | 516 | 33827 | 48039 | 32391 01–07–2017 |
| 9 | ಕರಕಲಮಾದಹಳ್ಳಿ ಗ್ರಾಮದ ಮುಖ್ಯ ರಸ್ತೆಯ ಚರಂಡಿ ದುರಸ್ಥಿಪಡಿಸಿರುವುದು | 0.44 | ಪ್ರಶಾಂತ ಕೆ.ಎಂ | 43857 | 877 | 1754 | – | 439 | 3382 11–12 | 40787 | 32389 3–07–2017 |
| 10 | ದಾರಿಬೇಗ ೂರು ಗ್ರಾಮದಲ್ಲಿ ಚರಂಡಿ ಹೂಳೆತ್ತುವುದು ಮತ್ತು ಗ್ರಾವೇಲ್ ಹಾಕುವುದು | 0.37 | ಡಿ.ಎಸ್ ಬಸವಣ್ಣ | 36377 | 327 | 1455 | – | 364 | 3382 / 10 | 33831 | 32392 04–07–2017 |

| | | | | | | | | | | | |
|---|---|---|---|---|---|---|---|---|---|---|---|
| 11 | ಚಿರಕನಹಳ್ಳಿ ಗ್ರಾಮದಲ್ಲಿ ಚರಂಡಿ ಹೊಳತ್ತೆವುದು | 0.39 | ಇಂಧುಧರ | 38796 | – | – | – | – | 3382/55 | 38796 | 032397 - 25–07–2017 |
| 12 | ಕರಕಲಮಾದಹಳ್ಳಿ ಗ್ರಾಮದಲ್ಲಿ ಚರಂಡಿ ಹೊಳೆತ್ತುವುದು | 0.3 | ಕೆ.ಎಂ ಪ್ರಶಾಚಿತ್ | 29640 | 593 | 1185 | – | 296 | 3382/13 | 27566 | 32396 25–07–2017 |
| 13 | ಕರಕಲಮಾದಹಳ್ಳಿ ಗ್ರಾಮದಲ್ಲಿ ಕುಡಿಯುವ ನೀರನ ಪೈಪ್‌ಲೈನ್ ದುರಸ್ಥಿ | 0.46 | ಇಂಧುಧರ | 43211 | – | – | – | – | 3382/57 | 43211 | 32398 25–07–2017 |
| 14 | ಚಿರಕನಹಳ್ಳಿ ಗ್ರಾಮದಲ್ಲಿ ಜಾನುವಾರಂಗಳ ಕುಡಿಯುವ ನೀರಿನ ತೊಟ್ಟಿ ನಿರ್ಮಾಣ | 0.52 | ಲೋಕೇಶ್ | 50793 | 1015 | 2032 | – | 508 | 28672–3 | 47238 | 32407 26–09–2017 |
| 15 | ವಡ್ಡಗೆರೆ ಗ್ರಾಮದ 1ನೇ ವಾರ್ಡ್‌ನಲ್ಲಿ ಚರಂಡಿ ಹೂಳೆತ್ತುವು | 0.2055 | ಡಿ.ರವಿ | 20000 | – | – | – | – | 3382/54 | 20000 | 032412 09–11–2017 |

| | | | | | | | | | | | |
|---|---|---|---|---|---|---|---|---|---|---|---|
| | ದು | | | | | | | | | | |
| 16 | ವಡ್ಡಗೆರೆ ಗ್ರಾಮದ ಶಿವಪ್ರಸಾದ್ ಮನೆಯಿಂದ ಬಸವೇಶ್ವರ ದೇವಸ್ಥಾನ ವರೆಗೆ ಚರಂಡಿ ನಿರ್ಮಾಣ | 0.52 | ಡಿ.ರವಿ | 29440 | – | – | – | – | – | 29440 | 0324154-12-2017 |
| 17 | ಚಿರಕನಹಳ್ಳಿ ಗ್ರಾಮದ ಪ.ಜಾತಿ ಬೀದಿಯಲ್ಲಿ ಕೊಂಗಳಯ್ಯನ ಮನೆಯಿಂದ ಪಂಚಾಯಿತಿ ಹಾಲ್‌ವರೆಗೆ ರಸ್ತೆ ಅಭಿವೃದ್ಧಿ | 0.52 | ಡಿ.ಎಸ್ ಬಸವಣ್ಣ | 51887 | 1037 | 2074 | – | 519 | 338215–16 | 48227 | 32416 20–12–2017 |
| 18 | ವಡ್ಡಗರೆ ಗ್ರಾಮದ ಶಿವರಾಧ್ಯ ಮನೆಯಿಂದ ದೇವಮ್ಮನ ಮನೆಯವ | 0.52 | ಡಿ.ರವಿ | 51200 | – | – | – | – | 3382/51–52 | 51200 | 32411 |

| | | | | | | | | | | | |
|---|---|---|---|---|---|---|---|---|---|---|---|
| | ರೆಗೆ ಬಾಕ್ಸ್ ಚರಂಡಿ ನಿರ್ಮಾಣ | | | | | | | | | | |

ಮುಂದುವರಿದು 2016–17 ಮತ್ತು 2017–18 ಅನುಮೋದಿತ ಕ್ರಿಯಾಯೋಜನೆಯಲ್ಲಿ 30 ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅನುಮೋದನೆಗೊಂಡಿರುತ್ತದೆ. ಆದರೆ 16 ಅಭಿವೃದ್ಧಿ ಕಾಮಗಾರಿಗಳನ್ನು ಮಾತ್ರ ಅನುಷ್ಠಾನಗೊಂಡಿರುವ ದಾಖಲಾತಿಗಳನ್ನು ಪರಿಶೀಲನೆಗೆ ನೀಡಿರುತ್ತಾರೆ. ಅವುಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶಕ್ಕೆ ಅಳವಡಿಸದೇ ಇರುವುದು ಕಂಡುಬಂದಿರುತ್ತದೆ. ಮತ್ತು ಸದರಿ ಪಾವತಿಯಾದ ಬಿಲ್ಲುಗಳಲ್ಲಿ ಯಾವುದೇ ತೆರಿಗೆಗಳನ್ನು ಕಟಾಯಿಸಿದೇ ಬಿಲ್ಲಿನ ಪೂರ್ಣ ಮೊತ್ತವನ್ನು ಗುತ್ತಿಗೆದಾರರಿಗೆ ಚೆಕ್ ಮೂಲಕ ಪಾವತಿಸಿರುತ್ತಾರೆ, ಮತ್ತು ಕೆಲವು ಕಾಮಗಾರಿ ಬಿಲ್ಲುಗಳಲ್ಲಿ ತೆರೆಗೆಗಳನ್ನು ಕಟಾಯಿಸಿದ್ದು ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡಿರುವ ಬಗ್ಗೆ ಯಾವುದೇ ಮಾಹಿತಿ ಲಭ್ಯವಿರುವುದಿಲ್ಲಾ.

6) The report of Lokayukta Police and the Executive officer extracted above indicate that under 14th Finance Scheme Rs.21.19 lakhs for the year 2016-17 and Rs.21.76 lakhs for the year 2017-18 were released to the Vaddagere Gram Panchayathi; though Rs.11.00 lakhs were required to be spent for the purpose of drinking water, street light etc., Rs.13.16 lakhs was spent; payments were made on the basis of defective quotations; acknowledgements for having issued cheques not obtained; the bill relating to purchase of materials were not uploaded in the concerned software; though 30 works were approved for the year 2016-17 and 2017-18, documents relating 16 works were made available to the I.O. and the documents in respect of remaining 14 works were not made available to the Investigation Officer; on verification of the documents pertaining to the 16 works, it was noticed that, those works were not uploaded to the concerned software and the tax amount was not deducted while making payment to the contractors.

7) Thereafter, an observation note was prepared and sent to the 3rd respondent, to submit his reply. Accordingly, 3rd respondent has submitted his reply to the observation note, wherein he has denied the observations made against him. He also tried to point out that the investigation report is not based upon the relevant documents. However, he has failed to explain as to the misplacement of the documents relating to remaining 14 works, highlighted in the investigation report. Therefore, at this stage, the explanation offered by the 3rd respondent cannot be believed and accepted. Having regard to the investigation report submitted by the Dy.S.P, Karnataka Lokayukta, Chamarajanagar and also the report submitted by the Executive Officer, Taluk Panchayath, Gundlupete Taluk, to the CEO, Zilla Panchayath, Chamarajanagar District, extracted above, in my considered view a detailed enquiry is required to be conducted.

8) Since, the material collected during the course of investigation, prima-facie reveals that the respondent No.3, the then PDO of Vaddagere Gram Panchayath did not maintain utmost honesty, integrity, devotion to duty, while discharging his official duty as PDO and misappropriated the public funds and thereby committed misconduct, within the meaning of Rule 3(i) to (iii) of KCS (Conduct) Rules, 1966, this is a fit case to make a recommendation to the Competent Authority U/Sec. 12(3) of Karnataka Lokayukta Act. Accordingly, a recommendation is made to the Competent Authority to initiate disciplinary proceedings against the respondent No.3 and to entrust the inquiry to this authority under Rule 14(A) of

Karnataka Civil Services (Classification, Control and Appeal) Rules 1957.

9) Further, as per u/Sec. 12(4) of the Karnataka Lokayukta Act, 1984, the Competent Authority is required to intimate this Authority as early as possible but latest within three months from the date of receipt of this report, the action taken or proposed to be taken on this report against said officials.

Connected records are enclosed.

Sd/- 24/11/2020

**(Justice P. Vishwanatha Shetty)**
**Lokayukta, State of Karnataka,**
**Bengaluru.**